(ಇಂದು ದಿನಾಂಕ 27-09-2022 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು - ಪ್ರತಿವಾದಿ ಪರ ಶ್ರೀ ಎಸ್.ಜೆ.ಎನ್. ವಕೀಲರಿಂದ-**

ಸ.ನಂ. 90/10 ಇದು ನನ್ನ ಹಕ್ಕಿನ ಸ್ಥಳ ಆಗಿರುತ್ತದೆ. ಸದರಿ ಸ್ಥಳದ ಕ್ಷೇತ್ರವನ್ನು ದಾವಾದಲ್ಲಿ ನಮೂದಿಸಿದ್ದಿರಾ ಎಂದರೆ ನೆನಪಿಲ್ಲ. ಸದರಿ ಸರ್ವೆ ನಂಬರಿನಲ್ಲಿ ಇರುವ ಕ್ಷೇತ್ರದಲ್ಲಿ ನನ್ನ ಪಾಲಿಗೆ 0-9-0 ಮತ್ತು 0-4-0 ಇರುತ್ತದೆ. ಸ.ನಂ. 90/10 ರಲ್ಲಿರುವ ಕ್ಷೇತ್ರ ನನ್ನ ಹೆಸರಿಗೆ ಯಾವಾಗ ಬಂದಿತು ಎಂದರೆ ಸುಮಾರು 6 - 7 ವರ್ಷಗಳಾಗಿರಬಹುದು.

2 ನೇ ಪ್ರತಿವಾದಿಯು ನನ್ನ ಹಳೆ ಮನೆಯ ಪಕ್ಕದ ಮನೆಯವರು. 2 ನೇ ಪ್ರತಿವಾದಿಯು ಅವರ ಸದರಿ ಮನೆಯಲ್ಲಿ ನಾವು ಹುಟ್ಟುವುದಕ್ಕಿಂತ ಮೊದಲೇ ವಾಸ್ತವ್ಯದಲ್ಲಿ ಇದ್ದರು. 2 ನೇ ಪ್ರತಿವಾದಿಯ ಹಕ್ಕಿನ ಸ್ಥಳವನ್ನು ನಾನು ದಾವೆಯಲ್ಲಿ ತೋರಿಸಿರುವುದಿಲ್ಲ. 2 ನೇ ಪ್ರತಿವಾದಿಯು ವಾಸ್ತವ್ಯ ಇರುವ ಮನೆ ನಂಬರನ್ನು ದಾವೆಯಲ್ಲಿ ತೋರಿಸಿರುವುದಿಲ್ಲ.

2 ನೇ ಪ್ರತಿವಾದಿಯವರು ಯಾವಾಗ ವಿದ್ಯುತ್ ಸಂಪರ್ಕವನ್ನು ತೆಗೆದುಕೊಂಡಿದ್ದರು ಎಂದರೆ ನಾವು ತೆಗೆದುಕೊಂಡ ಸಮಯದಲ್ಲಿ ನಮ್ಮ ವಿದ್ಯುತ್ ಕಂಬದಿಂದಲೇ ತೆಗೆದುಕೊಂಡಿರುತ್ತಾರೆ. ಸದರಿ ವಿದ್ಯುತ್ ಕಂಬಕ್ಕೆ ನಂಬರ್ ಇರುವುದಿಲ್ಲ. ನನ್ನ ಹಳೆ ಮನೆ ನಂಬರ್ 1594 ಮತ್ತು 1595 ಆಗಿರುತ್ತದೆ.

ನಾನು ಹೊಸ ಮನೆಯನ್ನು ನಿರ್ಮಿಸಿ ಸುಮಾರು 15 ವರ್ಷಗಳು ಆಗಿರುತ್ತವೆ. ಸದರಿ ಮನೆ ನಂ. 1594/1 ಆಗಿರುತ್ತದೆ. ಹೊಸ ಮನೆಯನ್ನು ಕಟ್ಟುವಾಗ ನಾನು ಪುರಸಭೆಯವರಿಂದ ಅನುಮತಿ ಪಡೆದುಕೊಂಡಿರುತ್ತೇನೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಹಾಜರುಪಡಿಸಲು ತೊಂದರೆ ಇತ್ತಾ ಎಂದರೆ ಅವಶ್ಯಕತೆ ಇಲ್ಲ ಎಂದು ಹಾಜರುಪಡಿಸಿರುವುದಿಲ್ಲ. ನಾನು ಹೊಸ ಮನೆ ನಿರ್ಮಿಸುವ ಮೊದಲೇ ಕೆ.ಇ.ಬಿ. ವಿದ್ಯುತ್ ತಂತಿಗಳು ನಮ್ಮ ಮನೆಯ ಮೇಲಿನಿಂದ ಹಾದು ಹೋಗಿರುತ್ತವೆ. ನಾನು ನನ್ನ ಕರ್ತವ್ಯದಿಂದ 2016 ರಲ್ಲಿ ನಿವೃತ್ತಿ ಹೊಂದಿರುತ್ತೇನೆ. ನಾನು ನಿವೃತ್ತಿ ಹೊಂದುವ ಪೂರ್ವದಲ್ಲೇ ಹೊಸ ಮನೆಯನ್ನು ಕಟ್ಟಿರುತ್ತೇನೆ.

ನಾನು ದಾವಾ ಹಾಕುವ ಸಮಯದಲ್ಲಿ ಸ.ನಂ. 90/9 ರಲ್ಲಿ ಎಷ್ಟು ಕ್ಷೇತ್ರ ಇದೆ ಎಂದು ತೋರಿಸಿರುವುದಿಲ್ಲ. ಸದರಿ ಸ.ನಂ. 90/9 ನನ್ನ ಹಕ್ಕಿನ ಸ್ಥಳ ಆಗಿರುತ್ತದೆ. ಸ.ನಂ. 90/8 ಮತ್ತು 90/7 ರ ಕ್ಷೇತ್ರವನ್ನು ನಾನು ದಾವೆಯಲ್ಲಿ ತೋರಿಸಿರುವುದಿಲ್ಲ. 2 ನೇ ಪ್ರತಿವಾದಿಯ ಹಕ್ಕಿನ ಸ್ಥಳವನ್ನು ದಾವೆಯ ಜೊತೆ ಸಲ್ಲಿಸಿದ ನಕಾಶೆಯಲ್ಲಿ ಕಾಣಿಸಿರುತ್ತೇನೆ. ಸ.ನಂ. 90/7, 90/8 ಮತ್ತು 90/9 ರಲ್ಲಿನ ಮನೆಗಳಿಗೆ ವಿದ್ಯುತ್ ಸಂಪರ್ಕವು ನನ್ನ ಹೊಸ ಮನೆ ಕಟ್ಟುವ ಪೂರ್ವದಲ್ಲೇ ಕೊಡಲಾಗಿದೆ.

ಸ.ನಂ. 90/7 ರಲ್ಲಿ ವಿದ್ಯುತ್ ಕಂಬ ಇರುವ ಬಗ್ಗೆ ನಾನು ದಾವೆಯಲ್ಲಿ ತೋರಿಸಿದ್ದಿರಾ ಎಂದರೆ ನೆನಪಿಲ್ಲ. ಸ.ನಂ. 90/9 ರಲ್ಲಿರುವ ಕ್ಷೇತ್ರವು ನನ್ನ ಪಾಲಿನ ಹಕ್ಕಿಗೆ ಯಾವಾಗ ಬಂದಿತು ಎಂದು ದಾವಾದಲ್ಲಿ ತೋರಿಸಲಿಲ್ಲ. ಸದರಿ ಜಾಗವು ನನಗೆ ಯಾವಾಗ ಬಂದಿತ್ತು ಎಂದು ನೆನಪಿಲ್ಲ.

ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಿದ್ಯುತ್ ಕಂಬ ಎಷ್ಟು ಎತ್ತರದಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ವಿದ್ಯುತ್ ಕಂಬಕ್ಕೆ ಅದರದೇ ಆದ ಸಂಖ್ಯೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ವಿದ್ಯುತ್ ಕಂಬವನ್ನು ನಾನು ಖರೀದಿಸಿರುವ ಬಗ್ಗೆ ಯಾವುದೇ ದಾಖಲೆ ನನ್ನ ಬಳಿ ಇಲ್ಲ. ಸದರಿ ವಿದ್ಯುತ್ ಕಂಬವನ್ನು ನಾನು ಖರೀದಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿದ್ಯುತ್ ತಂತಿಗಳು ಹಾದುಹೋಗುವ ಜಾಗದಲ್ಲಿಯೇ ಮನೆ ನಿರ್ಮಿಸಿದ್ದೇನೆ ಎಂದರೆ ನಾವು ಮನೆ ನಿರ್ಮಿಸುವಾಗ ವಿದ್ಯುತ್ ತಂತಿಗಳು 6 feet ಮೇಲೆ ಇತ್ತು. ವಿದ್ಯುತ್ ತಂತಿ ಹಾದುಹೋಗುವ ಜಾಗದಲ್ಲಿ ಮನೆ ಕಟ್ಟಲು ಪುರಸಭೆಯವರು ಅನುಮತಿ ಕೊಡುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ